CC 35/2025
PW-1
CC 35/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 04.04.2026

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಸಂತೆಬೆನ್ನೂರಿನಲ್ಲಿ ಕುಮುದಾ ಹೆಸರಿನ ಸ್ವಂತ ಹೋಟೇಲ್ ನಡೆಸುತ್ತಿದ್ದೇನೆ. ಆರೋಪಿ ನನಗೆ 25-30 ವರ್ಷಗಳಿಂದ ಪರಿಚಯ. ನನ್ನ ತಂದೆ ಐ ಬಿ ಯಲ್ಲಿ ದಿನಗೂಲಿಯಲ್ಲಿ ಅಡಿಗೆಭಟ್ಟರಾಗಿ ಕೆಲಸ ಮಾಡುತ್ತಿದ್ದರು. ಆರೋಪಿಯ ತಂದೆ ಐ ಬಿ ಯಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಹೋಟೇಲ್ ನಡೆಸಲು ಪರವಾನಗಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಫುಟ್‌ಪಾತ್ ನಲ್ಲಿ ಹೋಟೇಲ್ ನಡೆಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಫುಟ್ ಪಾತ್ ಮೇಲೆ ಪಾಸ್ಟ್ ಫುಡ್ ಅಂಗಡಿ ನಡೆಸುತ್ತೇನೆ. ಪ್ರತಿದಿನ 5-6 ಸಾವಿರ ವ್ಯಾಪಾರ ಆಗಿ ಅದರಲ್ಲಿ ನನಗೆ 2-3 ಸಾವಿರ ಆದಾಯ ಬರುತ್ತದೆ. ಪ್ರತಿ ತಿಂಗಳಿಗೆ 60-70 ಸಾವಿರ ಆದಾಯ ಬರಬಹುದು. ನನ್ನ ದೂರಿನಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಏನು ವ್ಯಾಪಾರ ಮಾಡುತ್ತೇನೆ ಮತ್ತು ನನಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದು ಬರೆಸಿಲ್ಲ ಎಂದರೆ ಸಾಕ್ಷಿಯು ಹೋಟೇಲ್ ನಡೆಸುತ್ತಿದ್ದೇನೆ ಎಂದು ಬರೆಸಿದ್ದೇನೆ ಆದರೆ ಫುಟ್ ಪಾತ್ ಮೇಲೆ ಪಾಸ್ಟ್ ಫುಡ್ ಎಂದು ಮತ್ತು ಎಷ್ಟು ಆದಾಯ ಬರುತ್ತದೆ ಎಂದು ಬರೆಸಿಲ್ಲ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಮರುಪಾವತಿ ಮಾಡುವುದಿಲ್ಲ. ನನಗೆ ತಿಂಗಳಿಗೆ 60-70 ಸಾವಿರ ಆದಾಯ ಬಂದರೆ ನಾನು ಆದಾಯ ತೆರಿಗೆ ಮರುಪಾವತಿ ಮಾಡಬೇಕಾಗುತ್ತದೆ ಎಂದರೆ ಸರಿ.

ನನಗೆ ಆರೋಪಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 09.12.2024 ರಂದು ಆರೋಪಿಯು ಹಣ ಕೇಳಲು ಬಂದಿದ್ದರು. ಆಗ ನನ್ನ ಬಳಿ ಅಷ್ಟೊಂದು ಹಣ ಇರಲಿಲ್ಲ. ಮೂರು ತಿಂಗಳಲ್ಲಿ ಹಣ ಹೊಂದಿಸಿಕೊಡುವಂತೆ ಹೇಳಿ ಹೋಗಿದ್ದರು. ನಾನು ಸಹ ಮೂರು ತಿಂಗಳು ಬೇಕು ಎಂದು ಸಮಯ ತೆಗೆದುಕೊಂಡಿದ್ದೆ. ದಿನಾಂಕ 12.12.2024 ರಲ್ಲಿ ಆರೋಪಿಯೇ ನಮ್ಮ ಮನೆಗೆ ಬಂದು ಪ್ರಶ್ನಿತ ಚೆಕ್ಕನ್ನು ಭರ್ತಿ ಮಾಡಿ ಸಹಿ ಮಾಡಿಕೊಟ್ಟಿರುತ್ತಾರೆ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿಗೆ ಬಳಸಿದ ಶಾಹಿ ಮತ್ತು ಉಳಿದ ಬರವಣಿಗೆಗೆ ಬಳಸಿದ ಶಾಹಿ ಬೇರೆ ಬೇರೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. 5 ಲಕ್ಷ ಹಣ ಚೀಟಿ ಹಣ ಇರುತ್ತದೆ. ನಾನು ಸಂತೆಬೆನ್ನೂರಿನಲ್ಲಿ ಚೀಟಿಯನ್ನು ಹಾಕಿದ್ದೆ. ನಾನು ಚೀಟಿಯಲ್ಲಿ ಹಣ ತೆಗೆದಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. 5 ಲಕ್ಷ ಹಣ ಚೀಟಿಯಲ್ಲೇ ತೆಗೆದಿದ್ದು ಇರುತ್ತದೆ. ಆರೋಪಿಯು ನನ್ನ ಕಡೆ 5 ಲಕ್ಷ ಹಣವನ್ನು ನಗದು ರೂಪದಲ್ಲಿಯೇ ಪಡೆದಿರುತ್ತಾರೆ. ನಾನು ಆರೋಪಿಗೆ 500 ಮುಖಬೆಲೆಯ ನೋಟುಗಳಲ್ಲಿಯೇ ಹಣ ಕೊಟ್ಟಿರುತ್ತೇನೆ. ಸದರಿ ವಿಷಯವನ್ನು ನಾನು ಮೊದಲಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಹಣವನ್ನು ಚೀಟಿಯಲ್ಲಿ ಎತ್ತಿದ್ದೆ ಎಂದು ಸಹ ಮೊದಲಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ವಿಷಯಗಳನ್ನು ನೋಟೀಸು,ದೂರು ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನನಗೆ ಪಾಸ್ಟ್ ಫುಡ್ ಬಿಸಿನೆಸ್ ವ್ಯಾಪಾರ ಬಿಟ್ಟರೆ ಬೇರೆ ಆದಾಯ ಇರುತ್ತದೆ. ನನಗೆ ವಾಣಿಜ್ಯ ಮಳಿಗೆಗಳು ಇರುತ್ತವೆ. ವಾಣಿಜ್ಯ ಮಳಿಗೆಗಳು ಇರುತ್ತವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಸದರಿ ವಾಣಿಜ್ಯ ಮಳಿಗೆಗಳಿಂದ ತಿಂಗಳಿಗೆ 10 ರಿಂದ 13 ಸಾವಿರ ಬಾಡಿಗೆ ಬರುತ್ತದೆ. ಬಾಡಿಗೆ ಹಣವನ್ನು ಅಕೌಂಟ್ ಗೆ ಪಾವತಿಸುತ್ತಾರೆ. ವಾಣಿಜ್ಯ ಮಳಿಗೆಗಳು ನನ್ನ

ಹೆಂಡತಿ ಹೆಸರಿನಲ್ಲಿ ಇರುತ್ತವೆ. ನನ್ನ ಹೆಂಡತಿ ಹೆಸರಿನಲ್ಲಿರುವ ವಾಣಿಜ್ಯ ಮಳಿಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಆರೋಪಿಗೆ ಸಾಲ ಕೊಟ್ಟ ಬಗ್ಗೆ ಚೆಕ್ಕನ್ನು ಹೊರುತುಪಡಿಸಿದರೆ ಬೇರೆ ದಾಖಲೆ ಮಾಡಿಕೊಂಡಿಲ್ಲ. ಆರೋಪಿಗೆ ಹಣ ಕೊಡುವಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು. ಆರೋಪಿ ಒಬ್ಬರೇ ಹಣ ಪಡೆಯಲು ಬಂದಿದ್ದರು. ಸದರಿ ವಿಷಯವನ್ನು ನೋಟೀಸು ಮತ್ತು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿ ಕಡೆಯಿಂದ On demand promissory ಅಥವಾ ಕರಾರು ಪತ್ರ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**